# ಕುವೆಂಪು ಅವರ ಕಥೆಗಳ ವೈಶಿಷ್ಟ್ಯತೆ

ಶ್ವೇತಾರಾಣಿ ಹೆಚ್.

ಸಹ ಪ್ರಾಧ್ಯಾಪಕಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿ.ಜಿ. ನಗರ, ನಾಗಮಂಗಲ.

DOI: https://doi.org/10.5281/zenodo.17013677

## ABSTRACT:

ರಾಷ್ಟ್ರಕವಿ ಕುವೆಂಪು ಅವರು ನಾಲ್ಕು ಸಣ್ಣಕಥಾ ಸಂಕಲನಗಳನ್ನು ರಚಿಸಿದ್ದಾರೆ. ನನ್ನ ದೇವರು ಮತ್ತು ಇತರ ಕಥೆಗಳು, ಕಥೆಗಳೊಡನೆ ಆರಂಭದಲ್ಲಿ, ನರಿಗಳಿಗೇಕೆ ಕೋಡಿಲ್ಲ, ಸಂನ್ಯಾಸಿ ಮತ್ತು ಇತರ ಕಥೆಗಳು. ಇವರ ಕಾವ್ಯ, ಕಾದಂಬರಿ, ವೈಚಾರಿಕ ಲೇಖನಗಳು, ನಾಟಕಗಳು ಸಾಕಷ್ಟು ವಿಮರ್ಶೆಗೆ ಒಳಪಟ್ಟಿವೆ. ಕುವೆಂಪು ಅವರ ಸಣ್ಣಕಥೆಗಳು ಅತ್ಯಂತ ಸೂಕ್ಷ್ಮ ಸಂವೇದನಾಶೀಲ ಕಥೆಗಳಾಗಿವೆ. ಯಾರೂ ಅರಿಯದ ವೀರನಂತಹ ಕಥೆಯ ಪಾತ್ರಗಳು ಓದುಗರ ಮನದಲ್ಲಿ ಉಳಿದುಬಿಡುತ್ತವೆ. ಪ್ರಸ್ತುತ ನನ್ನ ಈ ಲೇಖನದಲ್ಲಿ ಕುವೆಂಪು ಅವರ ಸಣ್ಣಕಥೆಗಳಲ್ಲಿರುವ ವೈಶಿಷ್ಟ್ಯತೆಯನ್ನು ಪಾತ್ರಗಳ ಮೂಲಕ ಚರ್ಚಿಸಲಾಗಿದೆ.

"ನನ್ನ ದೇವರು" ಎನ್ನುವ ಕಥೆಯಲ್ಲಿ ಮದುವೆಯಾಗಿ ಒಂದೇ ವರುಷದಲ್ಲಿ ತನ್ನ ಪತಿಯನ್ನು ಕಳೆದುಕೊಂಡ ಬಾಲಕಿ ಯೌವ್ವನಕ್ಕೆ ಕಾಲಿರಿಸಿದಾಗ ಆ ಯುವತಿಯ ಮನದಲ್ಲಿ ಉಂಟಾಗುವ ತುಮುಲಗಳ ಚಿತ್ರಣವಿದು. ತಾಕಲಾಟಗಳನ್ನು ಸಮರ್ಥವಾಗಿ ಚಿತ್ರಿಸಿರುವ ಕತೆ ಇದು. ಅವಳ ಸಂಕಟಕ್ಕೆ ಹತ್ತಿರವಿರುವ ಬಾವನ ಬಗೆಗೆ ಅವಳಿಗೆ ಆರಾಧನಾ ಭಾವವಿದೆ. ಅವಳ ಸುಪ್ತಮನಸ್ಸಿನಲ್ಲಿ ವಯೋಸಹಜ ಬಯಕೆಗಳು ಬುಗಿಲೇಳುವವು, ಆಕೆ ಅದನ್ನು ಶಮನಗೊಳಿಸಲೆಳಸುವ ಮನೋವ್ಯಾಘ್ರಾಟ ಈ ಕಥೆಯಲ್ಲಿ ಕಾಣಬಹುದು. ಅವಳ ಜೀವನದಲ್ಲಿ ಹತ್ತಿರವಿರುವ ಗಂಡು ಎಂದರೆ ಅದು ಭಾವ ಮಾತ್ರ. ತಂದೆ ಮನೆಯಿಂದ ಬಂದಮೇಲೆ ಪತಿಯ ನಿಧನದ ಬಳಿಕ ಅವಳು ಯೌವ್ವನಕ್ಕೆ ಕಾಲಿರಿಸುವ ಸಮಯದಲ್ಲಿ ಬೇರೆ ಪುರುಷರು ಅವಳಿಗೆ ಆತ್ಮೀಯರು ಆಗಿಲ್ಲ. ಸದಾ ಗಂಭೀರವಾಗಿರುವ, ತಿಳುವಳಿಕೆ ಇರುವ ಭಾವನ ಮೇಲೆ ಅವಳಿಗಿರುವ ಗೌರವವೂ ಕೂಡ ಅವಳ ತಾಕಲಾಟಗಳಿಗೆ ಕಾರಣವಾಗಿರಬಹುದು.

"ಸಾಲದ ಮಗು" ಕಥೆಯಲ್ಲಿ ತಂದೆ ತಾಯಿಯನ್ನು ಕಳೆದುಕೊಂಡಿರುವ ಅನಾಥ ಮಗು ತಂದೆ ಮಾಡಿದ ಸಾಲಕ್ಕೆ ಜೀತ ಮಾಡಬೇಕಾಗಿರುವ ಪರಿಸ್ಥಿತಿಯಲ್ಲಿ ಕರುಣೆ ಇಲ್ಲದೆ ನಡೆಸಿಕೊಳ್ಳುವುದು, ಜ್ವರದ ತಾಪದಲ್ಲಿ ನರಳುವ ಎಂಟು ವರ್ಷದ ಬಾಲಕ ಮಳೆಯಲ್ಲಿ ಮೀನು ಕುಕ್ಕೆಯನ್ನು ಗೌಡನ ಆದೇಶದ ಮೇಲೆ ತರಲು ಹೋಗಿ ಹಾವು ಕಚ್ಚಿ ಸಾಯುವುದು, ಆ ಸಾವಿಗೂ ಮರುಗದ ಗೌಡನ ದುರ್ಗುಣ, ದುರಾಸೆ ಇವುಗಳ ಅನಾವರಣವಿಲ್ಲಿದೆ.

**KEYWORDS:**

ದುರಾಸೆ, ಮದುವೆ, ಕುವೆಂಪು, ಸಣ್ಣ ಕಥೆ, ಮಾನವೀಯ ಸಂಬಂಧಗಳಲ್ಲಿ ಬಿರುಕು, ಕರುಣೆ.

ರಾಷ್ಟ್ರಕವಿ ಕುವೆಂಪು ಅವರು ನಾಲ್ಕು ಸಣ್ಣಕಥಾ ಸಂಕಲನಗಳನ್ನು ರಚಿಸಿದ್ದಾರೆ. ನನ್ನ ದೇವರು ಮತ್ತು ಇತರ ಕಥೆಗಳು. ಕಥೆಗಳೊಡನೆ ಆರಂಭದಲ್ಲಿ. ನರಿಗಳಿಗೇಕೆ ಕೋಡಿಲ್ಲ. ಸಂನ್ಯಾಸಿ ಮತ್ತು ಇತರ ಕಥೆಗಳು. "ನನ್ನ ದೇವರು" ಎನ್ನುವ ಕಥೆಯಲ್ಲಿ ಮದುವೆಯಾಗಿ ಒಂದೇ ವರುಷದಲ್ಲಿ ತನ್ನ ಪತಿಯನ್ನು ಕಳೆದುಕೊಂಡ ಬಾಲಕಿ ಯೌವ್ವನಕ್ಕೆ ಕಾಲಿರಿಸಿದಾಗ ಆ ಯುವತಿಯ ಮನದಲ್ಲಿ ಉಂಟಾಗುವ ತುಮುಲಗಳ ಚಿತ್ರಣವಿದು. ಜ್ವರದಿಂದ ಅವಳ ಪತಿ ತೀರಿಕೊಂಡಾಗ ಅವಳ ಸ್ವಗತ ಆ ಸಂದರ್ಭದ ದಾರುಣತೆಯನ್ನು ಹೀಗೆ ವಿಶದಪಡಿಸುತ್ತದೆ. "ಮರುದಿನದಲ್ಲಿ ಶ್ಮಶಾನದಲ್ಲಿ ನನ್ನ ಕೈಬಳೆ ಒಡೆದರು. ನನ್ನ ಮೈಮೇಲಿದ್ದ ಆಭರಣಗಳನ್ನೆಲ್ಲ ತೆಗೆದರು. ಮಂಗಳಸೂತ್ರ ಬಿಚ್ಚಿದರು. ನನ್ನ ಕಣ್ಣೆದುರಿನಲ್ಲಿಯೆ ಅಗ್ನಿದೇವನು.... ನಾನು ಮಾವನ ಮನೆಗೆ ಬಂದ ಒಂದು ವರುಷದಲ್ಲಿಯೆ ನನ್ನ ಸಕಲ ಸೌಭಾಗ್ಯವೂ ಬರಿದಾಯಿತು. ನನಗಾಗ ಹದಿನೈದು ತುಂಬಿತ್ತು ..." (ಪು.ಸಂ 207 ನನ್ನದೇವರು) ಕ್ರಮೇಣ ಅವಳಲ್ಲಿ ಯೌವನ ಆವರಿಸಿತು. ಅವಳ ಭಾವನಿಗೆ ಆಗ 27 ವರುಷ ವಯಸ್ಸು. (ಅವಳ ಪತಿಗಿಂತ ಮೂರು ವರುಷ ಹಿರಿಯರು). ಸಜ್ಜನರೂ, ವಿದ್ಯಾವಂತರೂ ಆಗಿದ್ದ ಅವರು ಮದುವೆ ಆಗಿರಲಿಲ್ಲ. ಜನ ಆತನಿಗೆ ತಲೆ ಸರಿಯಿಲ್ಲ ಎಂದು ಏನೇನೊ ಮಾತನಾಡಿಕೊಳ್ಳುತ್ತಿದ್ದರು. ಆದರೆ ಕಷ್ಟದಲ್ಲಿ ಕುಗ್ಗದ ಭಾವನವರನ್ನು ಕಂಡರೆ ಈಕೆಗೆ ಗೌರವಭಾವ. ಆದರೆ ದಿನಗಳೆದಂತೆ ಮನಸ್ಸಿನ ದೌರ್ಬಲ್ಯ ಇವಳನ್ನು ತುಯ್ಯತೊಡಗಿತು. ಆ ತಾಕಲಾಟಗಳನ್ನು ಸಮರ್ಥವಾಗಿ ಚಿತ್ರಿಸಿರುವ ಕತೆ ಇದು. ಅವಳ ಸಂಕಟಕ್ಕೆ ಹತ್ತಿರವಿರುವ ಭಾವನ ಬಗೆಗೆ ಅವಳಿಗೆ ಆರಾಧನಾ ಭಾವವಿದೆ. ಅವಳ ಸುಪ್ತಮನಸ್ಸಿನಲ್ಲಿ ವಯೋಸಹಜ ಬಯಕೆಗಳು ಬುಗಿಲೇಳುವವು ಆಕೆ ಅದನ್ನು ಶಮನಗೊಳಿಸಲೆಳಸುವ ಮನೋವ್ಯಾಘ್ರಾಟ ಈ ಕಥೆಯಲ್ಲಿ ಕಾಣಬಹುದು. ಅವಳ ಜೀವನದಲ್ಲಿ ಹತ್ತಿರವಿರುವ ಗಂಡು ಎಂದರೆ ಅದು ಭಾವ ಮಾತ್ರ. ತಂದೆ ಮನೆಯಿಂದ ಬಂದಮೇಲೆ ಪತಿಯ ನಿಧನದ ಬಳಿಕ ಅವಳು ಯೌವ್ವನಕ್ಕೆ ಕಾಲಿರಿಸುವ ಸಮಯದಲ್ಲಿ ಬೇರೆ ಪುರುಷರು ಅವಳಿಗೆ ಆತ್ಮೀಯರು ಆಗಿಲ್ಲ. ಸದಾ ಗಂಭೀರವಾಗಿರುವ, ತಿಳುವಳಿಕೆ ಇರುವ ಭಾವನ ಮೇಲೆ ಅವಳಿಗಿರುವ ಗೌರವವೂ ಕೂಡ ಅವಳ ತಾಕಲಾಟಗಳಿಗೆ ಕಾರಣವಾಗಿರಬಹುದು.

ಮಾನವೀಯತೆಗೆ ಸವಾಲೆಸೆಯುವ ಮತ್ತೊಂದು ಕತೆ "ಸಾಲದ ಮಗು".

ದುಡ್ಡಿನಾಸೆಯ ಊರ ಗೌಡನಿಗೆ ದುರಾಸೆ, ಒಕ್ಕಲು ಆಳು ರಂಗನ ಹೆಂಡತಿ ಸತ್ತು 2 ವರ್ಷದ ಸುಬ್ಬನನ್ನು ತಾಯಿ ಇಲ್ಲದ ತಬ್ಬಲಿಯನ್ನಾಗಿಸುತ್ತಾಳೆ. ಕೆಲವೇ ವರ್ಷಗಳಲ್ಲಿ ರಂಗನೂ ಕೂಡ ಖಾಯಿಲೆಯಿಂದ ಸಾಯುತ್ತಾನೆ. ಅವನು ಮಾಡಿದ ಮುನ್ನೂರು ರೂಪಾಯಿ ಸಾಲಕ್ಕೆ ಮಗ ಸುಬ್ಬನೇ ಹೊಣೆಗಾರ. ಸಾಲದ ಸಲುವಾಗಿ ಹತ್ತು ವರುಷದ ಸುಬ್ಬನನ್ನು ಜೀತಕ್ಕೆ ಇಟ್ಟುಕೊಳ್ಳುತ್ತಾನೆ ಗೌಡ. ಸುಬ್ಬನಿಂದ ದಿನವಿಡೀ ವಯಸ್ಸಿಗೆ ಮೀರಿದ ಕೆಲಸವನ್ನು ಮಾಡಿಸುತ್ತಾನೆ. ಅದೊಂದು ದಿನ ನಡುರಾತ್ರಿ ಜಡಿಮಳೆಯಲ್ಲಿ ಮಲಗಿದ್ದ ಮಗು ಸುಬ್ಬನನ್ನು ಕಾಲಿನಿಂದ ಒದ್ದು ಎಚ್ಚರಿಸುತ್ತಾನೆ. "ಅನಾಥರಿಗೆ ಪರಮ ಜನನಿಯಾದ ನಿದ್ರಾದೇವಿಯ ಮಡಿಲಲ್ಲಿ ಆ ಪರದೇಶಿ ಬಾಲಕನು ಮರವಟ್ಟು ಬಿದ್ದಿದ್ದನು" ಗೌಡನ ಅಬ್ಬರಕ್ಕೆ ಎದ್ದ ಸುಬ್ಬ ಕತ್ತಲಲ್ಲಿ, ಮಳೆಯಲ್ಲಿ ಹೊಳೆಗೆ ಹೋದವ ಮನೆಗೆ ಮರಳಲಿಲ್ಲ. "ಮೀನು ತಿನ್ನಲೆಂದು ಬಂದು ಅದರೊಳಗಿದ್ದ ಕೃಷ್ಣಸರ್ಪ ಬುಸ್ಸೆಂದು ಚಿಮ್ಮಿ ಸುಬ್ಬನನ್ನು ಕಚ್ಚಿ ಓಡಿಹೋಯಿತು." ಮರುದಿನ ಹೊಲದಲ್ಲಿ ಅವನ ಹೆಣ ಸಿಕ್ಕಿದಾಗ ಗೌಡನು "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು!" ಎಂದು ಮರುಕಪಟ್ಟನು. ತಬ್ಬಲಿ ಮಗು ತಂದೆತಾಯಿಯರನ್ನು ಹಿಂಬಾಲಿಸಿತ್ತು. ಮಗುವಿನ ಪ್ರಾಣಕ್ಕಿಂತ ಗೌಡನಿಗೆ ಹಣವೇ ಮುಖ್ಯವಾಯಿತು. ಹಣದ ಮುಂದೆ ಇಲ್ಲಿ ಮಾನವೀಯತೆ ಮರೆಯಾಯಿತು. ಹಣವೇ ಇಲ್ಲಿ ಮುಖ್ಯವಾಯಿತು ಹೊರತು ಒಂದು ಜೀವ ಹೀನವಾಯಿತು. ಮನುಷ್ಯನೊಳಗಿರುವ ಅಪರಿಮಿತ ಕ್ರೌರ್ಯದ ಅನಾವರಣವನ್ನಿಲ್ಲಿ ಕಾಣಬಹುದು.

"ಆದರ್ಶ ಸಾಧನೆ" ವಿದ್ಯಾರ್ಥಿ ದೆಸೆಯಲ್ಲಿ ಆದರ್ಶಗಳ ಬೆನ್ನತ್ತಿದ ಯುವಕನೊಬ್ಬನ ಕತೆ. ಆದರೆ ಆತನ ಯೋಚನೆಗಳು ಯಾವತ್ತೂ ಸ್ಥಿರವಾಗಿ ನಿಲ್ಲಲಿಲ್ಲ. ಸನ್ಯಾಸಿಯಾಗುತ್ತೇನೆ, ಬ್ರಹ್ಮಚಾರಿ ಆಗಿರುತ್ತೇನೆ ಎಂದೆಲ್ಲ ತನ್ನ ಸ್ನೇಹಿತರೊಂದಿಗೆ ಕಠಿಣವಾಗಿ ವಾದ ಮಾಡಿದ್ದ. ಅನಂತರ, ಮನೆಯವರ ಒತ್ತಾಯ ತಾಳಲಾಗದೆ ಮದುವೆ ಆಗುತ್ತಾನೆ. ಪತ್ನಿ ರೋಹಿಣಿಯೊಂದಿಗೆ ಅವನದು ಸುಖಸಂಸಾರ. ಗಂಡು ಮಗುವೂ ಹುಟ್ಟಿತು. ಆದರೆ ಹಠಾತ್ತಾಗಿ ಅವಳ ಮರಣ ಅವನನ್ನು ಕಂಗೆಡಿಸುತ್ತದೆ. ಆದರೆ ಕೊನೆಗೆ, ಮಗನನ್ನು ಪಾಲಿಸುತ್ತಿದ್ದ ರೋಹಿಣಿಯ ತಂಗಿ ಸೀತೆಯನ್ನು ಮದುವೆಯಾಗುತ್ತಾನೆ. ಮಾನವ ಪ್ರಲೋಭನೆಗಳನ್ನು ಗೆಲ್ಲುವುದು ಕಷ್ಟಸಾಧ್ಯ. ಅವನು ಅನುಕೂಲಕ್ಕೆ ತಕ್ಕಂತೆ ತನ್ನ ಬದುಕನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತಾನೆ. ಒಂದು ಅನುಕೂಲಕರ ವಾತಾವರಣದಲ್ಲಿ ಬದುಕು ರೂಢಿಸಿಕೊಂಡವನು ಜೀವನದ ಸತ್ಯ ಅರಿಯುವಲ್ಲಿ ವಿಫಲನಾಗುತ್ತಾನೆ. ಆದರೆ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವುದೇ ಜೀವನ.

"ಔದಾರ್ಯ" ಕತೆ ತೀರ್ಥಹಳ್ಳಿಯ ಅಮಲ್ದಾರನು ಮುಸ್ಸಂಜೆಯಲ್ಲಿ ತುಂಗಾನದಿಯ ದಡಕ್ಕೆ ಹೋದಾಗಿನ ಒಂದು ಘಟನೆ. ಅಮಲ್ದಾರನ ಬಾಲ್ಯದಲ್ಲಿ

ಅವನ ಶಾಲಾ ಮಾಸ್ತರಾಗಿದ್ದವರು ಡೇವಿಡ್. ಅವರು ಆ ದಿನ ಮಬ್ಬುಗತ್ತಲಿನಲ್ಲಿ ಅವನ ಬಳಿ ಬಂದು, ತಮ್ಮ ಬದುಕಿನ ದಾರುಣ ಕತೆ ಹೇಳುವ ಪ್ರಸಂಗ. ತನ್ನ ಮೇಷ್ಟರ ನೆನಪು ಮರುಕಳಿಸಿರಬಹುದು. ಮಕ್ಕಳು ನೀರಿನಲ್ಲಿ ಸಾವಿನ ಆಟ ಆಡುತ್ತಿದ್ದಾಗ ಸಾಯುತ್ತಿದ್ದ ಕಿಟ್ಟುವನ್ನು ಬದುಕಿಸಿದ ಅದೇ ಡೇವಿಡ್ ಮೇಷ್ಟ್ರು ನೀರಿನಲ್ಲಿ ಮುಳುಗಿ ಸಾಯುವುದು ಬದುಕಿನ ದುರಂತ. ಅಮವಾಸ್ಯೆ, ಹುಣ್ಣಿಮೆಯ ಮೌಢ್ಯವನ್ನು ಈ ಕಥೆಯಲ್ಲಿ ನೆನಪಿಸುತ್ತಾರೆ. ಡೇವಿಡ್ ಮೇಷ್ಟ್ರು ಇಲ್ಲಿ ಮುಗ್ಧತೆ ಹಾಗೂ ಒಳ್ಳೆಯತನಕ್ಕೆ ಪ್ರತಿನಿಧಿಯಾಗಿ ನಿಲ್ಲುತ್ತಾರೆ. ಅಸಹಾಯಕತೆಯಿಂದ ಸಾವಿನ ಮಾರ್ಗ ಆಯ್ಕೆ ಮಾಡಿಕೊಳ್ಳುತ್ತಾರೆ.

"ಮೀನಾಕ್ಷಿಯ ಮನೆಮೇಷ್ಟರು" ಈ ಕಥೆಯಲ್ಲಿ ಮನೆಪಾಠವನ್ನು ಹೇಳಿಕೊಡಲು ಬರುತ್ತಿದ್ದ ಯುವಕನೊಬ್ಬನ ಪಡಿಪಾಟಲನ್ನು ಚಿತ್ರಿಸುವ ಕತೆ. ಮೀನಾಕ್ಷಿಯಲ್ಲಿ ಯೌವನ ಅರಳುತ್ತಿದ್ದಂತೆ ಅವಳಲ್ಲಿ ಅನುರಕ್ತನಾದ ಯುವಕ, ಅವಳನ್ನೇ ಮದುವೆಯಾಗುವ ಕನಸು ಕಾಣುತ್ತಾನೆ. ಅವಳಲ್ಲೂ ಅದೇ ಭಾವನೆ ಇರಬಹುದೆಂದು ಭಾವಿಸುತ್ತಾನೆ. ಆದರೆ ಅವಳ ಹೆತ್ತವರು ಸಭ್ಯ, ಶ್ರೀಮಂತನೊಬ್ಬನೊಡನೆ ಮೀನಾಕ್ಷಿಯ ಮದುವೆ ಮಾಡುತ್ತಾರೆ. ಈತನಿಗೆ ಭ್ರಮನಿರಸನ. ಅದೇ ಬೇಸರದಲ್ಲಿ ಮೀನಾಕ್ಷಿಯ ಗಂಡನನ್ನು ಕೊಲ್ಲುವ ಯೋಚನೆಯನ್ನು ಮಾಡುತ್ತಾನೆ. ಕೊಲ್ಲಲೆಂದು ಮೀನಾಕ್ಷಿಯ ಮನೆಗೆ ಹೋದಾಗ ಅಲ್ಲಿನ ಸಭ್ಯವಾತಾವರಣ ನೋಡಿ ಅವನಿಗೆ ಸತ್ಯದ ಮನವರಿಕೆಯಾಗುತ್ತದೆ. ಪ್ರಬುದ್ಧತೆ ಇಲ್ಲದ ಹುಡುಗನೊಬ್ಬನ ಹುಚ್ಚು ಮನಸ್ಥಿತಿ ವಾಸ್ತವದ ಅರಿವಿನೊಂದಿಗೆ ಬದಲಾಗುವ ಎಳೆಯನ್ನು ಈ ಕಥೆ ತೆರೆದಿಡುತ್ತದೆ.

"ಶ್ರೀಮನ್ಮೂಕವಾಯಿತು" ಕಥೆಯಲ್ಲಿ ಮೂಕಪ್ರಾಣಿಗಳ ನಡುವಿನ ಬಾಂಧವ್ಯ, ಅವುಗಳಲ್ಲಿ ಎಳಗರುವಿನ ತಾಯಿಯಾಗಿರುವ ಸೊಟ್ಟಕೋಡಿನ ಎಮ್ಮೆಯೂ ಒಂದು. ಮಳೆಗಾಲದ ಒಂದು ದಿನ. ರಂಗನು ದಿನವಿಡೀ ಗದ್ದೆ ಕೆಲಸ ಮಾಡಿ ಸಾಕಾಗಿ ಹಸಿದು ಮನೆಗೆ ಬರುತ್ತಾನೆ. ಕೈಕಾಲು ತೊಳೆದು ನೀರೊಲೆ ಮುಂದೆ ಕೂತು ಮೈ ಬೆಚ್ಚಗಾಗಿಸಿಕೊಂಡು, ಮಗನ ಜತೆ ಊಟಕ್ಕೆ ಕೂರುತ್ತಾನೆ. ಅವನ ಎಲೆಯ ಮೇಲೆ ನಾಗಿ ಬಿಸಿಬಿಸಿಯಾದ ಅಡುಗೆ ಬಡಿಸುತ್ತಾಳೆ. ಇನ್ನೇನು ತುತ್ತು ಎತ್ತಬೇಕು, ಅಷ್ಟರಲ್ಲಿ ಕೊಟ್ಟಿಗೆಯೊಳಗಿಂದ ಎಮ್ಮೆಯ ಕರು ಕೂಗಿದ ಸದ್ದಾಗುತ್ತದೆ. ಅವನಿಗೆ ಸೋಜಿಗವಾಗಿ, ಯಾಕೆ ತಾಯಿ ಎಮ್ಮೆ ಬಂದಿಲ್ಲವೇ?~ ಎಂದು ವಿಚಾರಿಸುತ್ತಾನೆ. ಯಾಕೋ ಇನ್ನೂ ಬಂದಿಲ್ಲ'ವೆಂದು ನಾಗಿ ಹೇಳುತ್ತಾಳೆ.

ರಂಗನು ಬಡಿಸಿದ ಎಲೆಯನ್ನು ಹಾಗೆಯೇ ಬಿಟ್ಟು ಕೊಟ್ಟಿಗೆಗೆ ಹೋಗಿ ನೋಡುತ್ತಾನೆ. ಕರು ಕಾಹಿಲೆಯಿಂದಲೂ, ಹಸಿವಿನಿಂದಲೂ, ತಾಯಿಯಿಲ್ಲದ

ಕಾರಣದಿಂದಲೂ ಸುಸ್ತಾಗಿ ಬಿದ್ದಿದೆ. ಅದಕ್ಕೆ ಮರದ ಒಳಲೆಯ ಮೂಲಕ ಹಾಲು ಕುಡಿಸಲು ಯತ್ನಿಸುತ್ತಾನೆ. ಸಾಧ್ಯವಾಗುವುದಿಲ್ಲ. ಎಮ್ಮೆಯನ್ನು ಎಲ್ಲಿಯಾದರೂ ಹುಲಿಗಿಲಿ ಹಿಡಿದಿದೆಯೋ ಎಂದು ಆತಂಕಪಟ್ಟು, ಅದನ್ನು ಹುಡುಕಲು ಬೆಳಕಿಗಾಗಿ ಒಂದು ದೊಂದಿ ಸಿದ್ಧಪಡಿಸಿಕೊಂಡು, ಊಟಮಾಡಿಯಾದರೂ ಹೋಗಿ ಎಂದು ಹೆಂಡತಿ ವಿನಂತಿಸಿದರೂ ಕೇಳದೆ, ತನ್ನ ನಾಯಿಗಳ ಜತೆ, ಆ ಅಪರಾತ್ರಿಯಲ್ಲಿ, ಆ ಕತ್ತಲ ಮಳೆಯಲ್ಲಿ, ಆ ಹಸಿವಿನಲ್ಲಿ ರಂಗ ಹೊರಟುಬಿಡುತ್ತಾನೆ. ಎಮ್ಮೆ ಹುಡುಕುತ್ತ ಅವನು ಒಂದು ರಾತ್ರಿ ಕಳೆದು ಬೆಳಿಗ್ಗೆ ಅರ್ಧದಿನ ಎಮ್ಮೆಯನ್ನು ಹುಡುಕುತ್ತಾನೆ.

ಕುವೆಂಪು ಅವರ ಸಣ್ಣ ಕಥೆಗಳಲ್ಲಿ ಅಡಕವಾಗಿರುವಂತಹ ವಿಚಾರಗಳು ಅಗಾಧವಾದದ್ದು. ಕುವೆಂಪು ಅವರು ಕಥೆಗಳನ್ನು ಹೇಳಲು ಬಳಸಿರುವ ತಂತ್ರ ಹಾಗೂ ಅದರೊಳಗೆ ಅಡಕವಾಗಿರುವ ವಾಚ್ಯಾರ್ಥ ಗೂಡಾರ್ಥ ವಿಶಿಷ್ಟವೆನಿಸಿಕೊಳ್ಳುತ್ತವೆ. ರಾಷ್ಟ್ರಕವಿಯವರ ಸಣ್ಣ ಕಥೆಗಳನ್ನು ಓದಿದಾಗ ಶ್ರೀಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳವಾಗಿವೆ, ಆದರೆ ಆ ಕಥೆಗಳು ತನ್ನ ಒಡಲೊಳಗೆ ಒಂದು ಗಂಭೀರವಾಗಿರುವಂತಹ ವಿಚಾರವನ್ನು, ವಿಡಂಬನೆಯನ್ನು ಹುದುಗಿಸಿಕೊಂಡಿರುವುದು ಮೇಲ್ನೋಟಕ್ಕೆ ಗ್ರಹಿಸಲು ಅಸಾಧ್ಯ. "ಅವಶ್ಯವಿದ್ದದ್ದು ಆರಡಿ ಆಸೆ ಪಟ್ಟದ್ದು ಊರಿಡಿ" ಈ ಕಥೆ ಸಾಮಾನ್ಯ ನೀತಿ ಕಥೆಯಂತೆ ಗೋಚರವಾಗುತ್ತದೆ. ಅದರೊಳಗೆ ಆಸೆಬುರುಕನೊಬ್ಬನ ದುರಾಸೆತನದಿಂದ ಹೇಗೆ ಅವನ ಜೀವನವನ್ನು ಇದ್ದುದರಲ್ಲಿ ತೃಪ್ತಿಯನ್ನು ಪಡೆಯದೆ ಅತಿಯಾಸೆಯಿಂದ ನರಕ ಸದೃಶವನ್ನಾಗಿಸಿಕೊಂಡ ಎಂಬುದನ್ನು ವಿವರಿಸುತ್ತದೆ.

ಪಹಮಾ ಎನ್ನುವ ರೈತನೊಬ್ಬ ಅವನ ಹೆಂಡತಿ ಮತ್ತು ಅತ್ತಿಗೆಯ ಮಾತನ್ನು ಕೇಳಿಸಿಕೊಂಡು ನಮಗೆ ಇನ್ನೂ ಸ್ವಲ್ಪ ಜಮೀನು ಇದ್ದಿದ್ದರೆ ನಾವು ಯಾವ ಶನಿಗೂ ಎದುರುತ್ತಿರಲಿಲ್ಲ ಎಂದು ಅಹಂನಿಂದ ತನಗೆ ತಾನೇ ನುಡಿದುಕೊಳ್ಳುತ್ತಾನೆ. ಅವನ ಪರೀಕ್ಷೆಗೆ ನಿಂತ ಶನಿ ಅವನಿಗೆ ಮತ್ತಷ್ಟು ಜಮೀನನ್ನು ಖರೀದಿಸುವ ಅವಕಾಶವನ್ನು ನೀಡುತ್ತಾ ಹೋಗುತ್ತಾನೆ. ಆತನಿಗೆ ಎಷ್ಟು ಜಮೀನು ಸಿಕ್ಕರೂ ಆಸೆ ಮಾತ್ರ ಕಡಿಮೆಯಾಗದು. ತಾನಿದ್ದ ಊರಿನ ಜಮೀನನ್ನೆಲ್ಲ ಮಾರಿ ಮತ್ತೊಂದು ಊರಿಗೆ ಹೋಗಿ ಅಲ್ಲಿ ಸಾವಿರಾರು ಎಕರೆ ಜಮೀನನ್ನು ಕೊಂಡು ಸಾಕಷ್ಟು ಹಣವನ್ನು ಗಳಿಸಿದ ಮೇಲೂ ಜಮೀನಿನ ಮೇಲೆ ಆತನ ವ್ಯಾಮೋಹ ಹೋಗುವುದಿಲ್ಲ. ಯಾರೋ ಒಬ್ಬ ದಾರಿಹೋಕನಿಂದ ಭಾಸ್ಕಿರರು ಸಾವಿರದ ಐನೂರು ರೂಪಾಯಿಗಳಿಗೆ ಇಲ್ಲಿಗಿಂತ ಹೆಚ್ಚು ಜಮೀನನ್ನ ಕೊಂಡುಕೊಂಡೆ ಎಂದು ತಿಳಿದು ಅಲ್ಲಿಗೆ ಪ್ರಯಾಣ ಬಳಸುತ್ತಾನೆ. ಅವರ ಕರಾರಿನಂತೆ ಒಂದು ದಿನಕ್ಕೆ 1500 ರೂಪಾಯಿಗಳು ಒಬ್ಬ ಮನುಷ್ಯ ಒಂದು ದಿನ ಚೌಕಾಕಾರವಾಗಿ ಸುತ್ತಿ ತಾನು ಮೊದಲು ಹೋದ ಜಾಗಕ್ಕೆ ಬಂದು ಸೇರಿದರೆ ಎಷ್ಟು ಜಮೀನನ್ನ ಆತ ಸುತ್ತಿ ಬಂದಿರುತ್ತಾನೋ ಅಷ್ಟು ಜಮೀನು ಅವನ ಪಾಲಾಗುತ್ತದೆ

ಎಂದು ಕರಾರು ಮಾಡಿರುತ್ತಾರೆ. ಅತಿಯಾಸೆಬುರುಕನಾದ ಈ ಪಹಮಾ ಜಮೀನಿನ ಆಸೆಯಿಂದ ಪ್ರಾಣದ ಮೇಲಿರುವ ಹಂಗನ್ನು ತೊರೆದು ಬಿಸಿಲನ್ನು ಲೆಕ್ಕಿಸದೆ ಸುತ್ತುತ್ತಾನೆ. ಇನ್ನಷ್ಟು ಮತ್ತಷ್ಟು ದೂರ ಮುಂದೆ ಹೋಗುತ್ತಲೇ ಇರುತ್ತಾನೆ. ಕೊನೆಗೆ ಹಿಂತಿರುಗುವ ಸಮಯ ತನ್ನ ಗುರಿಯನ್ನು ಮುಟ್ಟಲು ತುಂಬಾ ಪ್ರಯಾಸ ಪಡುತ್ತಾನೆ. ಆದರೆ ಅಲ್ಲಿಯೇ ಆತನ ಪ್ರಾಣ ಹೋಗಿಬಿಡುತ್ತದೆ. "ಅತಿ ಆಸೆಗೆ ಗತಿಗೇಡು" ಎಂಬಂತೆ ಈ ಕಥೆ ಮನುಷ್ಯನಿಗೆ ಇದ್ದುದರಲ್ಲಿ ತೃಪ್ತಿಪಡಬೇಕು ಎನ್ನುವುದನ್ನ ತಿಳಿಸುತ್ತದೆ. ಲಿಯೊ ಟಾಲ್ ಸ್ಟಾಯ್ ಅವರ "mnogon li cheloveku zemil nuzhno" (ಒಬ್ಬ ಮನುಷ್ಯನಿಗೆ ಎಷ್ಟು ಭೂಮಿ ಬೇಕು?) ಈ ಕಥೆಯ ಅನುವಾದವಾಗಿದೆ. ಪಹಮಾನ ದುರಾಸೆಗೆ ಸಿಕ್ಕ ಪ್ರತಿಫಲವನ್ನು ಕನ್ನಡಿಗರಿಗೆ ತಿಳಿಸುವ ಸಲುವಾಗಿ ಈ ಕಥೆ ಬರೆದಿದ್ದಾರೆ.

ಆಧ್ಯಾತ್ಮಿಕ ನೆಲೆಯಲ್ಲಿ ರಚಿತವಾದಂತಹ ಕಥೆ 'ಧರ್ಮ ಪುತ್ರ' ಅರ್ಧ ಸುಟ್ಟು ಒಣಗಿದ ಸೇಬಿನ ಮರಗಳು, ಮರದ ತುಂಡುಗಳು ಚಿಗುರುತವೆ ಎನ್ನುವಂತದ್ದು ವಾಸ್ತವಕ್ಕೆ ದೂರವಾದರೂ ರಮ್ಯಕಥಾನಕ. ಈ ಕಥೆ ತನ್ನೊಳಗೆ ಒಂದು ಅಧ್ಯಾತ್ಮಿಕ ಒಳದೃಷ್ಟಿ, ಜೀವನದ ಸಂಕೀರ್ಣ ವಿಚಾರವನ್ನು ಅಡಗಿಸಿಕೊಂಡಿದೆ. ಅದಕ್ಕೆ ಸಂಬಂಧಪಟ್ಟಂತೆ ಇಲ್ಲಿ ಕೆಲವೊಂದು ಘಟನೆಗಳನ್ನು ಉಲ್ಲೇಖ ಕೊಡುತ್ತಾರೆ. ಪದೇಪದೇ ಮೇಜನ್ನು ಒರೆಸುತ್ತಾ ಇದ್ದಂತಹ ಒಬ್ಬ ಸ್ತ್ರೀ ಕೊಳೆಯಾಗಿರುವಂತಹ ಬಟ್ಟೆಯಿಂದ ಮೇಜನ್ನು ಒರೆಸುತ್ತಾಳೆ, ಆದರೆ ಅದು ಸ್ವಚ್ಛವಾಗುವುದಿಲ್ಲ. ಇದನ್ನು ಗಮನಿಸಿದಂತಹ ಧರ್ಮ ಪುತ್ರ ಬಟ್ಟೆಯನ್ನು ಶುಚಿಗೊಳಿಸಿ ಒರೆಸಲು ಹೇಳುತ್ತಾನೆ. ಕಿನಾರೆ ಮಾಡುವಂತವರು ಮರದ ದಿಮ್ಮಿಯನ್ನು ಸ್ಥಿರವಾಗಿ ನಿಲ್ಲಿಸದೆ ಅದನ್ನು ಬಳಸಿಕೊಂಡು ಕಿನಾರೆ ನಿರ್ಮಿಸಲು ಹೆಣಗಾಡುವ ಸ್ಥಿತಿಯನ್ನು ಗಮನಿಸಿದಂತಹ ಧರ್ಮಪುತ್ರ ಮರದ ದಿಮ್ಮಿಯನ್ನು ಮೊದಲು ಸ್ಥಿರವಾಗಿ ನಿಲ್ಲಿಸಲು ಹೇಳುತ್ತಾನೆ. ಇದು ಅನೇಕ ಸೂಚನೆಗಳನ್ನು ಹೇಳುತ್ತದೆ. ನಮ್ಮ ಗುರಿ ಅಥವಾ ನಿರ್ಧಾರಗಳು ಸ್ಥಿರವಾಗಿ ಇಲ್ಲದೆ ಇದ್ದರೆ ಆ ಗುರಿಯನ್ನು ತಲುಪುವುದು ಕಷ್ಟಸಾಧ್ಯ. ಅದೇ ರೀತಿ ಆ ಕಡೆ ಚಲಿಸುವುದು ಕೂಡ ವ್ಯರ್ಥವಾಗಿರುತ್ತದೆ ಎಂಬುದನ್ನು ಇದು ಹೇಳುತ್ತದೆ. ಮನಸ್ಥಿತಿ ಶುದ್ಧವಾಗಿದ್ದರೆ ಎಲ್ಲವೂ ಸ್ವಚ್ಛವಾಗಿರುತ್ತದೆ. ಡಕಾಯಿತ ಮತ್ತು ಧರ್ಮಪುತ್ರನ ನಡುವೆ ನಡೆಯುವ ವಾಕ್ ಸಂಘರ್ಷವೆನ್ನಬಹುದು, ಡಕಾಯಿತನನ್ನು ಪರಿವರ್ತನೆ ಮಾಡುವಲ್ಲಿ ಧರ್ಮಪುತ್ರ ಯಶಸ್ವಿಯಾಗುತ್ತಾನೆ. ಕೊನೆಯಲ್ಲಿ ಹೇಳುತ್ತಾನೆ. "ಆದರೆ ನೀನು ನನಗೋಸ್ಕರವಾಗಿ ನಿಜವಾಗಿ ಪಶ್ಚಾತ್ತಾಪ ಕಂಬನಿ ದೊರೆಯುವವರೆಗೂ ನನ್ನ ಹೃದಯವು ಸಂಪೂರ್ಣವಾಗಿ ಕರಗಲಿಲ್ಲ" (ಕುವೆಂಪು ಸಮಗ್ರ ಗದ್ಯ ಸಂಪುಟ ಆರು ಸಂಪಾದಕರು ಕೆಸಿ ಶಿವಾರೆಡ್ಡಿ)

ಧರ್ಮ ಪುತ್ರನಿಗೆ ಜೀವನದ ವಾಸ್ತವ ಸತ್ಯಗಳು ಒಂದೊಂದಾಗಿ ಅನುಭವಕ್ಕೆ

ಬಂದು ಆತ ಅರ್ಥವನ್ನು ಮಾಡಿಕೊಂಡ ನಂತರ ಆ ಅವನ ಗುರುಗಳು ನೀಡಿದಂತಹ ಮೂರು ಅರ್ಥ, ಸುಟ್ಟು ಒಣಗಿದ ಸೇಬಿನ ಗಿಡಗಳು ಚಿಗುರುತ್ತವೆ. ಗಿಡದ ಚಿಗುರುವಿಕೆ ಇದೆಯಲ್ಲ ಹೊಸತನ್ನು ಸ್ವೀಕರಿಸುವುದು, ವಾಸ್ತವ ಬದುಕಿನ ಸತ್ಯದ ಅರಿವಾಗುವುದರ ಜೊತೆಗೆ ತಪ್ಪಿನ ಗ್ರಹಿಕೆ ಮತ್ತು ತಿದ್ದುಕೊಳ್ಳುವಿಕೆಯ ಸಂಕೇತವಾಗಿದೆ. ಚಿಗುರು ಹೊಸ ಆರಂಭವನ್ನು ಸೂಚಿಸುತ್ತದೆ. ಇಲ್ಲಿ ಡಕಾಯಿತನ ಹೊಸಗ್ರಹಿಕೆ ಆರಂಭವಾಗುತ್ತದೆ.

"ಕಾಬುಲಿವಾಲ" ಜಾತಿ ಮತ್ತು ಧರ್ಮಾತೀತವಾಗಿ ಸ್ನೇಹ ಸಂಬಂಧ ನಿರೂಪಿತವಾಗಿದೆ. ಹಣ್ಣಿನ ವ್ಯಾಪಾರಿ ಕಾಬೂಲಿವಾಲ ಹಾಗೂ ಈ ಕಥೆಯ ನಿರೂಪಕನ ಮಗಳಾದ ಗಿರಿಜೆ ಇವರಿಬ್ಬರ ನಡುವೆ ಬೆಳೆದ ಸ್ನೇಹ ವಿಶ್ವಾಸವನ್ನು ಈ ಕಥೆ ನಿರೂಪಿಸುತ್ತದೆ. "ನಿಲುವಂಗಿಗೆ ಕೈ ಹಾಕಿ ಒಂದು ಸಣ್ಣ ಮಾಸಿದ ಕಾಗದವನ್ನು ಈಚೆಗೆ ತೆಗೆದು ಮಡಿಕೆಯನ್ನು ನನ್ನ ಮೇಜಿನ ಮೇಲೆ ಅದನ್ನು ಹಾಕಿ ಎರಡು ಕೈಗಳಿಂದಲೂ ಸವರಿ ಸರಿ ಮಾಡಿದನು. ಅದು ತಸ್ಬೀರು ಅಲ್ಲ ಚಿತ್ರವಲ್ಲ ಒಂದು ಮಸಿಮಯವಾದ ಹೆಬ್ಬೆರಳ ಮುದ್ರೆ ಅವನ ಮುದ್ದು ಮಗಳ ಹೆಬ್ಬೆಟ್ಟಿನ ಗುರುತು ಯಾವಾಗಲೂ ಅವನ ಹೃದಯದ ಮೇಲೆ ಇತ್ತು". (ಪು ಸಂ 70 ಅದೇ ಪೂ) ಗಿರಿಜಾ ಎಂಬ ಮಗು, ಲೇಖಕನ ಮಗು ಚಿಕ್ಕವಳಿದ್ದಾಗ, ಅವನ ಹಣ್ಣುಗಳನ್ನು ಮಾರಲು ಬರುತ್ತಾ ಇದ್ದಂತಹ ಕಾಬೂಲಿವಾಲ ತನ್ನ ಮಗಳನ್ನು ಅವಳದೇ ವಯಸ್ಸಿನ ಗಿರಿಜೆಯಲ್ಲಿ ನೋಡುತ್ತಾ ಸಮಯವನ್ನು ಕಳೆಯುತ್ತಿದ್ದ. ಹೀಗಿರುವಾಗ ಅವನು ಮಾರಿದ ಶಾಲಿನ ಹಣ ನೀಡದೆ ಸತಾಯಿಸುತ್ತಿದ್ದವನ ಮೇಲೆ ಉದ್ರಿಕ್ತನಾಗಿ ಜಗಳವಾಡುವಾಗ ಆಕಸ್ಮಿಕವಾಗಿ ಚಾಕುವಿನಿಂದ ಚುಚ್ಚಿದ ಪರಿಣಾಮ ಅವನು 14 ವರ್ಷ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅವನು ಬಿಡುಗಡೆಯಾದ ಮೇಲೆ ಗಿರಿಜೆಯನ್ನು ನೋಡಲು ಬರುತ್ತಾನೆ. ಅವನ ಕಷ್ಟಕ್ಕೆ ಮರುಗಿದ ಲೇಖಕ ತನ್ನ ಮಗಳ ಮದುವೆಯ ದುಂದುವೆಚ್ಚಕ್ಕೆ ಕಡಿವಾಣ ಹಾಕಿ ಕಾಬೂಲಿವಾಲನಿಗೆ ಹಣ ನೀಡುತ್ತಾನೆ. ಅವನ ಮುಖದಲ್ಲಿ ವ್ಯಕ್ತವಾಗುವ ಸಂತಸವನ್ನು ನೋಡಿ ನಿರೂಪಕನು ಖುಷಿ ಪಡುತ್ತಾನೆ.

ಲೋಕದಲ್ಲಿ ತಂದೆ ತಾಯಿಯರ ಪ್ರೀತಿಗಿಂತ ಮಿಗಿಲಾದದ್ದು ಯಾವುದು ಇಲ್ಲ ಎನ್ನುವಂತಹ ಒಂದು ಸಂದೇಶವನ್ನು ಸಾರುವಂತಹ ಕಥೆ "ಮಾತ ಪಿತೃ ಭಕ್ತಿ". "ಲೋಕದಲ್ಲಿ ಏಕಾಂತ ವಾಸವು ಬಹು ಕಠಿಣವಾದದ್ದು ಸಾಯುವ ಕಾಲದಲ್ಲಿ ಮನುಷ್ಯರು ಬದುಕಿಸಲಾರದೆ ಇದ್ದರು ಸಮೀಪದಲ್ಲಿದ್ದರೆ ಸಾಯುವವರಿಗೆ ಎಷ್ಟೋ ಹಿತ. ಹಾರಿಹೋಗುವ ಜೀವವು ಕಣ್ಣೀರ ಸೇವೆಯನ್ನು ಅಪೇಕ್ಷಿಸುವುದು, ಅದಕ್ಕೆ ಆ ಕಂಬನಿಗಳೇ ತೃಪ್ತಿಯನ್ನುಂಟು ಮಾಡುವವು. ಎಂತಹ ಮರಣವಾದರೂ ಎಷ್ಟು ಕಠಿಣವಾದದ್ದಾದರೂ ಬಂಧುಬಳಗದವರ ನಡುವೆ ಸಾಯುವುದೇ ಲೇಸು" (ಪೂರ್ವೋಕ್ತ ಪುಟ ಸಂಖ್ಯೆ 99) ಈ ಕಥೆಯಲ್ಲಿ ರಾಮಯ್ಯನ ಮಗ ಅಲ್ಲಿ

ತೊಂದರೆಗೆ ಒಳಗಾಗಿ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಊರಿನಲ್ಲಿ ತುತ್ತು ಅನ್ನಕ್ಕೂ ಪರದಾಡುವಂಥ ತಂದೆ ತಾಯಿಗಳ ಕಷ್ಟವೆಂದರೆ ಆತ ಪಟ್ಟಣದಲ್ಲಿ ಕೆಲಸ ಕಳೆದುಕೊಂಡದ್ದು ಇನ್ನೊಂದು ಕಡೆ. ಇಳಿ ಸಂಜೆ ಹಾಸಿಗೆ ಹಿಡಿದು ನರಳಾಡುತ್ತಿರುವ ತಂದೆ, ಈ ಸಂದರ್ಭದಲ್ಲಿ ಮಗ ಮರಳಿ ಬರುತ್ತಾನೆ. ವಯಸ್ಸಾದವರಿಗೆ, ಮರಣಶೈಯೆಯಲ್ಲಿರುವವರಿಗೆ ಮಕ್ಕಳು ಬಳಿಯಲಿದ್ದರೆ ಒಂದು ಬಗೆಯ ನೆಮ್ಮದಿ. ಎಲ್ಲ ದೇವರ ಸೇವೆಗಿಂತ ಮಾತಪಿತೃಗಳ ಸೇವೆಯೇ ಶ್ರೇಷ್ಠವಾದದ್ದು ಎಂದು ಇಂದಿನ ಯುವಜನತೆ ಮನಗಾಣಬೇಕು ಎಂಬ ಸಂದೇಶವಿದೆ.

ಅದೃಷ್ಟವಾಗಿ ಬಂದು ತನ್ನ ಪ್ರಾಣವನ್ನು ಕಾಪಾಡಿದಂತಹ ರಾಮಯ್ಯನ ಮಗನ ಆ ಕೃತಜ್ಞತೆಯನ್ನು ಹಿಡಿದು ಆ ಶ್ರೀಮಂತ ಇವನ ಮನೆಯ ಬಾಗಿಲಿಗೆ ಧಾವಿಸಿ ಬರುತ್ತಾನೆ. ಅವನ ಸಂಕಷ್ಟಗಳಿಗೆ ತಾನು ಸಹಾಯ ಮಾಡುವುದಲ್ಲದೆ ತನ್ನ ಮಗಳನ್ನು ಕೊಟ್ಟು ವಿವಾಹವನ್ನು ಮಾಡಿ ಆ ಬಡವನಾದರೂ ಅವನೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾನೆ. ಇಲ್ಲಿ ನಾವು ಕಾಣಬಹುದಾದಂತಹ ಮಾನವೀಯತೆ ಮೂಲಸೆಲೆಯನ್ನು ನೋಡಬಹುದು. ಹಣ ಮನುಷ್ಯ ಗಳಿಸಿದ್ದೇ ಹೊರತು, ಮನುಷ್ಯನನ್ನು ಹಣ ಗಳಿಸಲಾಗುವುದಿಲ್ಲ ಎಂಬುದನ್ನು ಈ ಕತೆ ಸಾರುತ್ತದೆ. ಶ್ರೀಮಂತನ ಪ್ರಾಣ ಉಳಿಸಿದ ಪ್ರತಿಯಾಗಿ ಆ ಹುಡುಗನಿಗೆ ಒಂದಷ್ಟು ಹಣವನ್ನು ನೀಡಿ ಕೈ ತೊಳೆದುಕೊಳ್ಳಬಹುದಿತ್ತು ಆದರೆ ಆ ಶ್ರೀಮಂತನ ಸರಳತನ ಹಾಗೂ ನಿಷ್ಠೆ, ಪ್ರಾಮಾಣಿಕತೆಯನ್ನು ನೋಡಬಹುದು.

ಮತ್ತೊಂದು ಕಥೆ "ಅಂದಿನ ರಾತ್ರಿ ಇನ್ನೊಮ್ಮೆ ಬರುವುದೇ" ಬರಲಾರದೆ, "ಅಜ್ಜಮ್ಮನೂ ಎಂದೂ ತೀರಿ ಹೋದರು. ಚಿಕ್ಕಮ್ಮನು ಹೋದರು. ಅವನು ಮೊನ್ನೆ ಹೋದರು. ಪುನಃ ಅಂತಹ ಒಂದು ದಿನವೂ ಸಿಕ್ಕುವುದಾದರೆ ನಾನು ಈಗಿರುವುದನ್ನೆಲ್ಲಾ ಧಾರೆ ಏರೆಯಲು ಸಿದ್ಧನಾಗಿದ್ದೇನೆ. ಆ ಕಥೆಗಳು, ಆ ಉಪನ್ಯಾಸಗಳು, ಆ ಸದಸ್ಯರುಗಳು, ಆಹಾ ಆ ಸ್ವಪ್ನ ರಾಜ್ಯವೇ ಸುಖಕರವಾಗಿದೆ. ಪ್ರಸ್ತುತ ಕಥೆಯಲ್ಲಿ ಚಿಕ್ಕ ವಯಸ್ಸಿನಲ್ಲಿ ಇದ್ದ ಹಳೆಯ ಮನೆಯ ನೆನಪುಗಳೊಂದಿಗೆ ಈ ಕಥೆ ಮೆಲಕು ಹಾಕಿಕೊಂಡಿದೆ. ತಲೆಮಾರುಗಳು ಕಳೆದಂತೆ ಹೇಗೆ ಮಾನವೀಯ ಸಂಬಂಧಗಳಲ್ಲಿ ಬಿರುಕು ಮೂಡುತ್ತವೆ ಮತ್ತೆ ಆ ಸಂಬಂಧಗಳ ರೀತಿ ಬದಲಾಗುತ್ತವೆ ಎನ್ನುವುದನ್ನು ಈ ಒಂದು ಕಥೆಯಲ್ಲಿ ಕಾಣಬಹುದು.

"ತಿಮ್ಮಾ ಬೋಯಿಯ ಕತ್ತೆ" ಮನುಷ್ಯ ಸಾಕು ಪ್ರಾಣಿಯೊಂದಿಗೆ ಇಟ್ಟುಕೊಂಡಿದ್ದ ಅನೂಹ್ಯ ಬಾಂಧವ್ಯವನ್ನು ನೋಡಬಹುದು. ಬೋಯಿಯು ಸತ್ತಕತ್ತೆಯ ಮೈ ಮೇಲೆ ಹರಿಯುತ್ತಿದ್ದ ಕಟ್ಟಿರುವೆಗಳನ್ನು ಕೋಪದಿಂದ ಒರೆಸಿದನು. ಪಾಪ ಅವನ ಮನಸ್ಸಿಗೆ ಕಟ್ಟಿರುವೆಗಳು ಸತ್ತ ಕತ್ತೆಯನ್ನು ಕಡಿದುದ್ದರ ನೋವಾಗಿರಬೇಕು" (ಪುಟ ಸಂಖ್ಯೆ 110)

ಈ ಒಂದು ಕಥೆಯಲ್ಲಿ ಮನುಷ್ಯ ಮತ್ತು ಪ್ರಾಣಿಯ ನಡುವೆ ಇರುವಂತಹ ಅನೂಹ್ಯ ಸಂಬಂಧವನ್ನು ಕಾಣಬಹುದು. ತಾನು ಪ್ರೀತಿಯಿಂದ ಸಾಕಿದ ಕತ್ತೆ ಮರಣಿಸಿದ ನಂತರ ಅದರ ಮೈಮೇಲೆ ಹರಿಯುವಂತಹ ಇರುವೆಗಳನ್ನು ತೆಗೆದು ಹಾಕುವ ತಿಮ್ಮಬೊಯಿ ತನ್ನ ಕತ್ತೆ ಸಾವಿಗೆ ಮರುಗುತ್ತಾನೆ. ಒಬ್ಬ ಗೆಳೆಯನು, ಸಹೋದರನು ತೀರಿ ಹೋದರೆ ಎಷ್ಟು ನೋವು ಮರುಕವನ್ನು ಅನುಭವಿಸುತ್ತಾರೋ ಅಷ್ಟು ನೋವು, ಮರಕವನ್ನು ಅವನು ವ್ಯಕ್ತಪಡಿಸುತ್ತಾನೆ. ಮಾನವೀಯತೆಗೆ, ಬಾಂಧವ್ಯಕ್ಕೆ ಮನುಷ್ಯನೇ ಆಗಬೇಕೆಂದೇನಿಲ್ಲ, ಪ್ರಾಣಿ ಮತ್ತು ಮನುಷ್ಯನ ನಡುವೆಯೂ ಅಂತಹ ಒಂದು ಬಾಂಧವ್ಯವಿರುತ್ತದೆ. ಇದೇ ರೀತಿ ಪ್ರಾಣಿ ಮತ್ತು ಮನುಷ್ಯ ನಡುವೆ ಮತ್ತೊಂದು ಕತೆ ಶ್ರೀಮನ್ಮೂಕವಾಯಿತು. ಇಲ್ಲಿ ಬರುವಂತಹ ಎಮ್ಮೆಯ ಕಥೆ ಕೂಡ ಪ್ರಾಣಿಗಳನ್ನು ತನ್ನಂತೆ ಪ್ರೀತಿಸುವ ಮನುಷ್ಯನ ಅಂತಃಕರಣ ಅನಾವರಣವಾಗಿದೆ.

### ಆಕರ ಗ್ರಂಥ:

1. ಶಿವಾರೆಡ್ಡಿ ಕೆ.ಸಿ. (ಸಂ), (2017), ಕುವೆಂಪು ಸಮಗ್ರ ಗದ್ಯ: ಸಂಪುಟ–6, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.